ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 6, May-Jun 2020, 77-81**
**©*IIMRD*, Mysuru**

IIMRD JOURNALS

**www.iimrd.com**

# ಸಂತ ಶಿಶುನಾಳ ಶರೀಫರ ತತ್ವಪದಗಳಲ್ಲಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ

**ದಯಾನಂದ***

## ಪೀಠಿಕೆ

'ಆತ್ಮಜ್ಞಾನಿಗಳ ಸ್ಮರಣೆಯೇ ಪುಣ್ಯಪ್ರದ' ಎನ್ನುವಂತೆ 19ನೇ ಶತಮಾನದಲ್ಲಿ ಜೀವಿಸಿ ಕನ್ನಡ ಕುಲಕ್ಕೆ ಆತ್ಮಜ್ಞಾನವನ್ನು ಅರುಹಿದವರು ಸಂತ ಶಿಶುನಾಳ ಶರೀಫರು. 'ಶರೀಫ' ಎಂಬ ನಾಮಾಂಕಿತವನ್ನು ಮರೆತರೆ ಈ ಸಂತ ಯಾವ ಜಾತಿ, ಧರ್ಮಕ್ಕೆ ಸೇರಿದವನೆಂದು ಗುರುತಿಸಲಾರದ ಮಟ್ಟಿಗೆ ಸರ್ವ ಧರ್ಮದ ಸಾರವನ್ನು ಮೈ, ಮನಸುಗಳಲ್ಲಿ ತುಂಬಿಕೊಂಡು ಜೀವನದ ಸಾರ್ಥಕತೆಯನ್ನು ಕಂಡವನು. ಶರೀಫರು ಮತದಲ್ಲಿ ಮುಸ್ಲಿಂ, ಗುರು ಬ್ರಾಹ್ಮಣ, ಅಂಕಿತದೈವ ಲಿಂಗಾಯತ ದೇವ ಬಸವಣ್ಣ ಈ ಮೂರು ಧರ್ಮಗಳ ಸಂಗಮವಾದ ಶರೀಫರು ಕವಿ, ಸಂತ ಹಾಗು ತತ್ವಜ್ಞಾನಿ ಮೇಲಾಗಿ ಮಾನವತಾವಾದಿಗಳಾಗಿದ್ದರು. ಒಂದೇ ಧಾರ್ಮಿಕ ನೆಲೆಯಲ್ಲಿ ನೆಲೆನಿಲ್ಲದೆ ಧರ್ಮಾತೀತರಾದ ಶರೀಫರು 'ಎಲ್ಲ ಧರ್ಮಗಳ ಬೋಧ ಒಂದೇ ಬ್ರಹ್ಮನಾದ ಒಂದೇ' ಎಂದು ಸಾರಿದ್ದಾರೆ. ಶರೀಫರ ತತ್ವಪದಗಳು ವೇದಾಂತ ಸಾರವನ್ನು ಮೀರಿದ, ಜನಸಾಮಾನ್ಯರಿಗೂ ಸುಲಭವಾಗಿ ತಲುಪುವ ಆಧ್ಯಾತ್ಮ ಗೀತೆಗಳೆಂದು ಹೇಳಬಹುದಾಗಿದೆ.

ಶಿಶುನಾಳ ಶರೀಫರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಶಿಶುವಿನಹಾಳ ಗ್ರಾಮದಲ್ಲಿ ಕ್ರಿ.ಶ.1819 ಮಾರ್ಚ್ 7ರಂದು ಮುಸ್ಲಿಂ ಸಮುದಾಯದ ದೇವಕಾರ ಮನೆತನದಲ್ಲಿ ಹುಟ್ಟಿದರು. ತಂದೆ ಇಮಾಮ್ ಹಜರತ್ ಸಾಹೇಬರು ತಾಯಿ ಹಜ್ಜೂಮಾ. ಮುಸ್ಲಿಂ ಧರ್ಮದಲ್ಲಿ ಹುಟ್ಟಿ ಮುಂದೆ ಧರ್ಮಾತೀತರಾಗಿ ಬದುಕು ಸವೆಸಿದವರು.

ಶರೀಫರು ತಮ್ಮ ಕಾಲದ, ತಮ್ಮ ಸುತ್ತಮುತ್ತಲಿನ ಸಾಮಾಜಿಕ ಮತ್ತು ರಾಜಕೀಯ ರೀತಿ ನೀತಿಗಳನ್ನು ಪರಾಮರ್ಶೆಗೆ ಒಳಪಡಿಸಿ ಆ ಮೂಲಕ ತಮ್ಮ ಚಿಂತನೆಗಳನ್ನು ರೂಪಿಸಿಕೊಂಡು ಅವುಗಳನ್ನು ತಮ್ಮ ಅನುಭಾವಿಕ ನೆಲೆಯಲ್ಲಿ ತತ್ವಪದಗಳ ರೂಪದಲ್ಲಿ ಸಮಾಜದ ಮುಂದಿಟ್ಟಿದ್ದಾರೆ. ಅವರ ಪದಗಳು ಸರ್ವಕಲಕ್ಕೂ ಸರ್ವಮಾನ್ಯವಾದ ತತ್ವ, ಮೌಲ್ಯಗಳನ್ನು ಪ್ರತಿಪಾದಿಸುತ್ತವೆ.

## ಶರೀಫರ ಪದಗಳಲ್ಲಿ ರಾಜಕೀಯ ಪ್ರಜ್ಞೆ

ಶಿಶುನಾಳ ಶರೀಫರು ಅಂದಿನ ಕಾಲದ ರಾಜಕೀಯ ಸ್ಥಿತಿಗತಿಗಳು ಸಾಮಾಜಿಕ ವಲಯದ ಮೇಲೆ ಯಾವ ರೀತಿ ಪ್ರಭಾವ, ಪರಿಣಾಮಗಳನ್ನು ಬೀರಿ ಸಾಮಾಜಿಕ ಬದಲಾವಣೆಗೆ ಕಾರಣವಾದವು ಎಂಬುವುದನ್ನು ವಾಸ್ತವ ಕಣ್ಣಿನಿಂದ ನೋಡಿ ಅದನ್ನೆ ತಮ್ಮ ಪದಗಳಲ್ಲಿ ಪಡಿಮೂಡಿಸಿದ್ದಾರೆ.

* *ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಸುಲೆಪೇಟ, ಚಿಂಚೋಳಿ ತಾಲೂಕು, ಕಲಬುರಗಿ–585324*

ರಾಜಕೀಯ ಕ್ಷೇತ್ರವು ಸಾಮಾಜಿಕ ಬೆಳವಣಿಗೆಯ ಅಂಗವಾಗಿರುವುದರಿಂದ ಒಂದು ಸಮಾಜದ ಏಳು ಬೀಳು ಆ ಸಮಾಜವನ್ನು ಆಳುವ ವರ್ಗ ಅಥವಾ ರಾಜಕೀಯ ಶಕ್ತಿಯನ್ನು ಅವಲಂಬಿಸಿರುತ್ತದೆ. ರಾಜ್ಯದಲ್ಲಿ ರಾಜಕೀಯ ಸ್ಥಿತಿ ಸುಭದ್ರವಾಗಿದ್ದರೆ ಆಳುವ ಶಕ್ತಿ ಜನಪರವಾಗಿದ್ದರೆ ಒಂದು ಸಮಾಜವು ಸುಖ, ಶಾಂತಿ, ನೆಮ್ಮದಿ ಪ್ರಗತಿಯತ್ತ ಸಾಗಿ ಮಾನವ ಕಲ್ಯಾಣವಾಗುತ್ತದೆ. ಒಂದು ವೇಳೆ ರಾಜಕೀಯ ವ್ಯವಸ್ಥೆ ಅಸ್ಥಿರವಾದರೆ, ಸ್ವಾರ್ಥಿ, ಜನವಿರೋಧಿಯಾದರೆ ಅದು ಆ ಸಮಾಜಕ್ಕೆ ಅಂಟಿಕೊಂಡ ಕಳಂಕವಾಗಿ ಸಮಾಜದ ಅವನತಿಗೆ ಕಾರಣವಾಗುತ್ತದೆ.

ಶರೀಫರ ಜೀವಿತಾವಧಿ (1819–1889) ಆಂಗ್ಲರ ಆಡಳಿತದ ಕಾಲ, ಆಂಗ್ಲರು ದೇಶಿಯ ಅರಸರನ್ನು ಕುತಂತ್ರದಿಂದ ಸೋಲಿಸಿ ಇಡಿ ದೇಶವನ್ನು ತಮ್ಮ ಕಾಲಾಳಾಗಿ ಇಟ್ಟುಕೊಂಡಿದ್ದರು. ಈ ಪರಿಸ್ಥಿತಿಯನ್ನು ಸ್ವತಃ ಕಣ್ಣಾರೆ ಕಂಡ ಶರೀಫರು ತಮ್ಮ ಕಾಲದ ರಾಜಕೀಯ ಅಸ್ಥಿರತೆಯಿಂದ ಸಾಮಾಜಿಕ ಬದುಕಿನಲ್ಲಿ ಉಂಟಾದ ಗೊಂದಲ, ಆತಂಕ, ಅಶಾಂತಿ, ಅನ್ಯಾಯ, ಶೋಷಣೆ, ಭೂ ಕಂದಾಯ ನೆಪದಲ್ಲಿ ರೈತರ ಮೇಲಾದ ಆರ್ಥಿಕ ಶೋಷಣೆ, ಕರಕುಶಲ ಗುಡಿ ಕೈಗಾರಿಕೆಗಳ ಅವನತಿ ಮುಂತಾದ ರಾಜಕೀಯ ಕಾರಣಗಳಿಂದಾದ ಸ್ಥಿತ್ಯಂತರಗಳನ್ನು ತಮ್ಮ ಪದಗಳ ವಸ್ತುವನ್ನಾಗಿಸಿಕೊಂಡು ಹಾಡಿದ್ದಾರೆ.

ಶರೀಫರಿಗೆ ಆಂಗ್ಲರ ಕಂಪನಿ ಸರ್ಕಾರದ ಆಡಳಿತ ತಂತ್ರ ಕೃಷ್ಣನ ಕುಶಲತೆಯ ರಾಜನೀತಿಯ ತಂತ್ರದಂತೆ ಕಂಡಿದೆ ಅದನ್ನು ಪದಗಳಲ್ಲಿ ತಂದು ಈ ರೀತಿಯಾಗಿ ಹಾಡಿದ್ದಾರೆ.

***"ಕುಶಲಗಾರ ಕಂಪನಿಯವರಮ್ಮಾ***

***ದೊರೆಗಳನ್ನೆಲ್ಲ ಮುರಿದರು ತಂಗಿ***

***ಪರಮ ಪುರುಷ ಫಿರಂಗಿಯವರು"***

ಒಡೆದು ಆಳುವ ಕುಶಲ ಕುತಂತ್ರ ರಾಜನೀತಿಯಿಂದ ದೇಶಿ ಅರಸರನ್ನು ಮೋಸದಿಂದ ಸೋಲಿಸಿ ಭಾರತದ ತುಂಬೆಲ್ಲ ಅಧಿಕಾರವನ್ನು ವಿಸ್ತರಿಸಿದರು.

ಭಾರತದ ಕೃಷಿ ವ್ಯವಸ್ಥೆಯನ್ನೆ ಬುಡಮೇಲು ಮಾಡಿದ ಕಂಪನಿ ಸರಕಾರದ ನೀತಿಗಳು, ಭೂಕಂದಾಯ ವಸೂಲಿ ಹೆಸರಲ್ಲಿ ರೈತರ ಮೇಲೆ ನಾನಾ ರೀತಿ ದೌರ್ಜನ್ಯಗಳನ್ನು ಎಸಗಿರುವುದನ್ನು ಶರೀಫರ ಪದಗಳಲ್ಲಿ ಪ್ರಸ್ತಾಪಿಸಲಾಗಿದೆ.

***"ಹಿಂದೂಸ್ಥಾನಕ ಬಂತು ಶೋಕ***

***ಮಂದಿಗಾಯ್ತು ಅತಿ ದುಃಖ***

***ಹಣದ ತೆರಿಗೆಯು ತಲೆಗೆ ಏಳು***

***ಎಣಿಸಿ ಹಡಗ ತುಂಬಿ ಹವಳವ***

***ಹೂಣಾದ ದೇಶಕ್ಕೆಲ್ಲ ಇದು***

***ಕುಣಿದು ಕುಣಿದು ದಣಿವು ಆದಿತು"***

ನಮ್ಮ ಕಲಬುರಗಿಯ ಹಳ್ಳಿ ಭಾಷೆಯಲ್ಲಿ "ಗಳಿಕಿ ಚಾರಾಣಿ, ಖರ್ಚ ಬಾರಾಣಿ" ಎನ್ನುವಂತೆ ರೈತರು ಆದಾಯಕ್ಕಿಂತ ತೆರಿಗೆಯನ್ನು ಹೆಚ್ಚು ಕೊಡಬೇಕಾಯಿತು. ಈ ಹಣದಿಂದ ಫಿರಂಗಿಯವರು ಐಷಾರಾಮಿ ಜೀವನ ನಡೆಸುವುದಲ್ಲದೆ ರೈತರ ಬದುಕನ್ನು ಹದ್ದುಗಳಂತೆ ಕಿತ್ತು ತಿಂದು ವಿಕೃತ ಆನಂದವನ್ನು ಅನುಭವಿಸುತ್ತಿದ್ದರು ಎಂಬ ಸಂಗತಿ ತಿಳಿದುಬರುತ್ತದೆ.

ಆಂಗ್ಲರ ರಾಜಕೀಯ ಅಧಿಕಾರ, ಅವರ ಆರ್ಥಿಕ ನೀತಿಗಳು ಭಾರತದ ಗುಡಿ, ಗೃಹ, ಕರಕುಶಲ ಕೈಗಾರಿಕೆಗಳ ಅವನತಿಗೂ ಕಾರಣವಾದವು. ಭಾರತವನ್ನು ಕೇವಲ ಕಚ್ಚಾವಸ್ತುಗಳ ಉತ್ಪಾದನಾ ಕೇಂದ್ರವನ್ನಾಗಿ ಮಾಡಿದರು. ಇಂತಹ ಅನೇಕ ರಾಜಕೀಯ ಪ್ರಜ್ಞೆ, ಪರಿಸರ ಕುರಿತಾದ ವಿಚಾರಗಳನ್ನು ತಿಳಿದುಕೊಳ್ಳಲು ಶರೀಫರ ವಾಸ್ತವ ಕಣ್ಣಿನ ಅನುಭವಗಳ ರೂಪದ ತತ್ವಪದಗಳು ಸಹಾಯಕವಾಗಿವೆ.

**ಶರೀಫರ ಪದಗಳಲ್ಲಿ ಸಾಮಾಜಿಕ ಪ್ರಜ್ಞೆ**

ಸಾಹಿತ್ಯ ಸಮಾಜದ ಪ್ರತಿಬಿಂಬ, ಗತಿಬಿಂಬ ಎನ್ನುವಂತೆ ಶರೀಫರ ತತ್ವಪದಗಳು ಅಂದಿನ ಸಮಾಜದ, ಸಂಸ್ಕೃತಿಯ ಪ್ರತಿಬಿಂಬವಾಗಿವೆ. ಶಿಶುನಾಳದಲ್ಲಿ ಹುಟ್ಟಿ ಬಾಳಿ ಬೆಳೆದು ಅಲ್ಲಿನ ವಿವಿಧ ಸಮುದಾಯಗಳ ಬಹುಮುಖಿ ಸಂಸ್ಕೃತಿಯ ಜನರ ಜೀವನ ರೀತಿ, ನೀತಿ, ನಂಬಿಕೆಗಳನ್ನು ಸಾಂದರ್ಭಿಕವಾಗಿ ಪ್ರಸ್ತಾಪಿಸುತ್ತ, ಸ್ಥಳಿಯ ಸಾಮಾಜಿಕ ಆಗುಹೋಗುಗಳಿಗೆ, ಸಾಂಸ್ಕೃತಿಕ ಸಂವೇದನೆಗಳಿಗೆ ತೀವ್ರವಾಗಿ ಸ್ಪಂದಿಸುತ್ತ ತಮ್ಮ ಸಾಮಾಜಿಕ ಚಿಂತನೆ, ಮೌಲ್ಯ, ಅನುಭವಗಳನ್ನು ತತ್ವಪದಗಳಲ್ಲಿ ಪಡಿಮೂಡಿಸಿದ್ದಾರೆ.

ಶರೀಫರು ನ್ಯಾಯನಿಷ್ಠುರರು ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ತಮ್ಮ ಆತ್ಮಸಾಕ್ಷಿಯನ್ನು ಮುಂದಿಟ್ಟುಕೊಂಡು ಬದುಕಿನ ಅಂಕುಡೊಂಕುಗಳನ್ನು ಸುತ್ತಲಿನ ಲೋಪದೋಷಗಳನ್ನು ಕಂಡಂತೆ ಹೇಳಿ ಅದರಿಂದಾಗುವ ಹಾನಿ ಕೆಡುಕುಗಳನ್ನು ಸೂಚಿಸಿ ಸತ್ಯ, ನ್ಯಾಯ, ನೀತಿ ಮಾರ್ಗದಲ್ಲಿ ಜನರನ್ನು ಮನ್ನಡೆಸಲು ಪ್ರಯತ್ನಿಸಿದ್ದಾರೆ.

ಅಂದಿನ ಸಮಾಜದಲ್ಲಿ ಬೇರೂರಿದ್ದ ಜಾತಿಯತೆ, ಮಡಿವಂತಿಕೆ, ಮೂಢನಂಬಿಕೆ, ಬಡವ–ಶ್ರೀಮಂತ ವರ್ಗ ತಾರತಮ್ಯ ಮುಂತಾದ ಅನಿಷ್ಟಗಳನ್ನು ಮುಲಾಜಿಲ್ಲಾದೆ ಖಂಡಿಸುತ್ತ, ವ್ಯಕ್ತಿ, ಧರ್ಮ, ಮತ್ತು ಸಮಾಜದ ಶುದ್ಧೀಕರಣದ ಮಾರ್ಗವನ್ನು ತಮ್ಮ ಪದಗಳಲ್ಲಿ ದರ್ಶಿಸಿದ್ದಾರೆ. ಸಮಾಜದ ವಾಸ್ತವ ಸ್ವರೂಪ ಕುರಿತ ಪ್ರಜ್ಞೆ, ಚಿಂತನೆ ಶರೀಫರ ಪದಗಳಲ್ಲಿ ಕಾಣಬಹುದಾಗಿದೆ.

ಶರೀಫರ ಸಾಮಾಜಿಕ ಚಿಂತನೆಗಳಿರುವ ಪದಗಳಲ್ಲಿ ಗ್ರಾಮೀಣ ಪರಿಸರದ ಅದರಲ್ಲೂ ಶಿಶುನಾಳ ಹಾಗೂ ಸುತ್ತಲಿನ ಹಳ್ಳಿಗಳ ಜನರ ಬದುಕಿನ ವಿವಿಧ ಮಗ್ಗಲುಗಳನ್ನು, ಸಾಮಾಜಿಕ ವ್ಯವಸ್ಥೆಯನ್ನು, ವ್ಯಕ್ತಿಗತ ಸ್ವಭಾವ ನಡತೆಯನ್ನು, ನಿಸರ್ಗದ ಕೋಪತಾಪಗಳ ಪರಿಣಾಮಗಳು, ಕೃಷಿ ಚಟುವಟಿಕೆಗಳು, ಆಚರಣೆಗಳು ಹೀಗೆ ನಿತ್ಯದ ಸನ್ನಿವೇಶಗಳ ಸತ್ಯತೆಯನ್ನು ಆಶುಕವಿತೆಗಳ ರೀತಿಯಲ್ಲಿ ತತ್ವಪದಗಳಾಗಿ ರಚಿಸಿ ಹಾಡಿದ್ದಾರೆ.

ಕೆಲವು ತತ್ವಪದಗಳ ಮೂಲಕ ಅಂದಿನ ಸಾಮಾಜಿಕ ಪರಿಸರದ ಪರಿಚಯ ಮಾಡಿಕೊಳ್ಳಬಹುದು.

***"ಕುಂಬಾರಕಿ ಈಕಿ ಕುಂಬಾರಾಕಿ"***

***"ಕುರುಬರೋ ನಾವು ಕುರುಬರೋ"***

ಮುಂತಾದ ಮೇಲಿನ ಪದಗಳಲ್ಲಿ ಅಂದಿನ ಗ್ರಾಮೀಣ ಸಾಮಾಜಿಕ ಪರಿಸರದಲ್ಲಿನ ಕುಲವೃತ್ತಿಗಳ ಮಾಹಿತಿ ತಿಳಿದುಬರುತ್ತವೆ ಗಡಿಗೆ ಮಾಡುವ ಕುಂಬಾರ, ಕುರಿ ಕಾಯುವ ಕುರುಬ, ಹೀಗೆ ಗೌಡ, ಪೊಲೀಸ ಗೌಡ, ಬಣಜಿಗರು ಬಾಗವಾನರು, ಶಾನಭೋಗರು, ಜಾಡರು, ಪಿಂಜಾರರು, ಇವರೆಲ್ಲರ ವೃತ್ತಿ ಸ್ವರೂಪ ಆಯಾಯ ಸಮುದಾಯದ ಸಂಸ್ಕೃತಿ, ಸಾಮಾಜಿಕ ನೆಲೆಯ ದರ್ಶನ ಮಾಡಿಸಿದ್ದಾರೆ.

ಸಾಮಾಜಿಕ ಪರಿಸರದಲ್ಲಿ ಕೃಷಿ ಮುಖ್ಯ ಕಸುಬಾಗಿದ್ದು, ಕೃಷಿ ಕೂಲಿಕಾರರ ಬದುಕು, ಶ್ರೀಮಂತರ ಶೋಷಣೆಯನ್ನು ಈ ಕೆಳಗಿನ ಪದಗಳಲ್ಲಿ ಚಿತ್ರಿತವಾಗಿರುವುದನ್ನು ಕಾಣಬಹುದಾಗಿದೆ.

***"ಬಾಲೆ ವಿಲಾಯಿತಿ ಹತ್ತಿ ಬಿಡಿಸಲಿಕ್ಕೆ***

***ಸೇರು ತಕ್ಕಡಿದಾರ ದಂಡಿಗೆ ಭಾರಿ ತೂಗುವರು ಬ್ಯಾರೆ***

***ಬಾರಿ ಬಾರಿ ಜಡಿ ಜಡಿದು ತೂಕ ಒಂದಕೆ***

***ಮೂರವರೆ ದುಡ್ಡುಗಳ ಕೊಡುತಿಹರು"***

ಶ್ರೀಮಂತರ ಹೊಲದಲ್ಲಿ ಕೂಲಿ ಮಾಡುವ ಬಡವರಿಗೆ ಸರಿಯಾದ ಕೂಲಿ ಸಿಗದೆ ಬಡವರ ಬೆವರಿಗೆ ಬೆಲೆ ಇಲ್ಲದಿರುವುದನ್ನು, ಶ್ರೀಮಂತರ ಹಂಗಿನಲ್ಲಿ ಬದುಕು ಸಾಗಿಸುವ ಅನಿವಾರ್ಯತೆಯನ್ನು ಪ್ರಸ್ತಾಪಿಸಿದ್ದಾರೆ.

***"ಮಾನಪಮಾನ ನಿನ್ನವಮ್ಮ ಎನಗೇನು***

***ಶ್ವಾನನಂತೆ ಬೊಗಳುತಿಹರು ಹೀನ ಜನರೆಲ್ಲರಿವರು"***

ಗುರು ಗೋವಿಂದ ಭಟ್ಟರು ಹಾಗೂ ತಮ್ಮ ನಡುವೆ ಇರುವ ಆತ್ಮೀಯತೆಯನ್ನು ಸಹಿಸದೆ ಹಿಂದೂ–ಮುಸ್ಲಿಮನ ನಡುವೆ ಅದೆಂತಹ ಸಂಬಂಧ ಎಂದು ಟೀಕಿಸುವ ಸಮಾಜದ ಕಟುಟೀಕೆಗೆ ಹೆದರದೆ ಅಷ್ಟೇ ನಿಷ್ಠುರವಾಗಿ 'ನಾಯಿ ಬೊಗಳಿದರೆ ದೇವಲೋಕ ಹಾಳಾಗತ್ತ' ಎನ್ನುವಂತೆ ಟೀಕಿಸುವವರ ಮನಸ್ಸಿನ ಕಲ್ಮಶವನ್ನು ತೊಳೆಯುವ ಪ್ರಯತ್ನ ಮಾಡಿದ್ದಾರೆ. ಜಾತಿ, ಮತಭೇದಗಳಿಂದ ಮನುಷ್ಯ ಮನುಷ್ಯತ್ವವನ್ನೇ ಮರೆತು ದ್ವೇಷದಿಂದ ಮನುಷ್ಯ ಮನುಷ್ಯರ ನಡುವೆ ಜಾತಿ, ಮತ, ಧರ್ಮಗಳ ಅಡ್ಡ ಗೋಡೆಯನ್ನು ಕಟ್ಟಿ ಸಮಾಜದ್ನ ಸ್ವಾಸ್ಥ್ಯವನ್ನು ಹದಗೆಡಿಸುತ್ತಿರುವವರನ್ನು ಟೀಕಿಸಿದ್ದಾರೆ.

ಮಡಿ, ಮೈಲಿಗೆ, ಶೀಲವೆಂದು ಮುಟ್ಟದೇ ದೂರ ಸರಿಯುವ ಜನರಿಗೆ ಅರ್ಥವಾಗುವಂತೆ ವಿಡಂಬಿಸಿರುವುದು ಈ ಕೆಳಗಿನ ಪದದಲ್ಲಿ ಕಾಣಬಹುದು.

***"ತೊಗಲ ಮಲಿಯ ಹಾಲು ಕುಡಿದು ದೊಡ್ಡವರಾಗಿ***

***ಶೀಲ ಮಾಡತೀರಿ ನಾಡೆಲ್ಲ"***

ಮೇಲ್ಜಾತಿ–ಕೆಳಜಾತಿ, ರಾಜ–ಮಂತ್ರಿ, ಎಲ್ಲರೂ ತೊಗಲ ಮೊಲೆಯಿಂದಲೇ ಹಾಲು ಕುಡಿದು ದೊಡ್ಡವರಾಗುವರು ಅಂದ ಮೇಲೆ ಈ ತಾರತಮ್ಯವೇಕೆ ಎಂದು ಪ್ರಶ್ನಿಸಿದ್ದಾರೆ.

***"ಬೋಕಿಯೊಳಗ ಮೂರು ಲೋಕ ಹುಟ್ಟಿತು***

***ಆ ಕುಲ ಈ ಕುಲ ಎಲ್ಲಿತ್ತು"***

ಯಾವುದು ಕುಲ ಜಾತಿಗಳು ಹುಟ್ಟಿನಿಂದ ಬರಲ್ಲ ಅವು ಮನುಷ್ಯನ ಸುಳ್ಳು ಪೊಳ್ಳು ಪ್ರತಿಷ್ಠೆಗಳೆಂದು ವಿಡಂಬಿಸಿ ಮಾನವೀಯ ಮೌಲ್ಯಗಳನ್ನು ಸಾರಿದ್ದಾರೆ.

ಅಲ್ಲದೆ ಅಂದಿನ ಸಮಾಜದ ಜನಪದರ ನಿತ್ಯದ ಬದುಕಿನ ಅಂಗಗಳಾದ ಹಬ್ಬ, ಹರಿದಿನ, ಜಾತ್ರೆಗಳು, ಮದುವೆ ಮುಂತಾದ ಸಂಸ್ಕಾರಗಳು, ಹೆಣ್ಣಿಗೆ ತೌರುಮನೆಯ ಮಹತ್ವ, ಹೀಗೆ ಅಂದಿನ ಸಾಮಾಜಿಕ, ರಾಜಕೀಯಕ್ಕೆ ಸಂಬಂಧಿಸಿದ ಹತ್ತು ಹಲವು ವಿಷಯಗಳ ಅರಿವಿನ ಪ್ರಜ್ಞೆಯನ್ನು ನಿಷ್ಪಕ್ಷಪಾತವಾಗಿ, ನ್ಯಾಯನಿಷ್ಠುರವಾಗಿ ತೆರೆದಿಡುವ ಪ್ರಯತ್ನವನ್ನು ಸಂತ ಶರೀಫರ ತತ್ವಪದಗಳಲ್ಲಿ ಕಾಣಬಹುದು.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಇಂತಹ ದಿವ್ಯ ಸಂದೇಶಗಳನ್ನು ನೀಡುತ್ತಾ ಹುಟ್ಟಿದ ದಿನದಂದೆ (1889 ಮಾರ್ಚ್ 7) ಮಹಾನುಭಾವರು ತಮ್ಮ ಸಾವಿನ ಅರಿವು ಮುಂಚಿತವಾಗಿಯೇ ತಿಳಿದಿರುತ್ತಾರೆ ಎನ್ನುವಂತೆ ಎಲ್ಲರಿಗೂ ಹೇಳಿ ಕೇಳಿ 'ಬಿಡತೇನಿ ದೇಹ ಬಿಡತೇನಿ' ಎಂದು ಹಾಡುತ್ತ ವಿದೇಹ ಕೈವಲ್ಯವನ್ನು ಪಡೆದು ಶಿಶುನಾಳಧೀಶನಲ್ಲಿ ಒಂದಾದರು. ಅವರ ದಿವ್ಯ ಸಂದೇಶಗಳು ಕನ್ನಡ ಕುಲಕೋಟಿಗೆ ದಾರಿದೀಪವಾಗಿವೆ. 'ಕನ್ನಡದ ಕಬೀರ' ಎಂದು ಪ್ರಸಿದ್ಧಿ ಪಡೆದ ಮಹಾನೀಯರಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಲಕ್ಷ್ಮೀನಾರಾಯಣ ಭಟ್ಟ, ಎನ್.ಎಸ್. (ಆಗಸ್ಟ್ 2010). ಶಿಶುನಾಳ ಶರೀಫ ಸಾಹೇಬರ ಗೀತೆಗಳು. ಸಪ್ನ ಬುಕ್ ಹೌಸ್ (ಪ್ರೈ.ಲಿ.), ಗಾಂಧಿನಗರ, ಬೆಂಗಳೂರು.
- ಡಾ. ಹೆಚ್.ಎಸ್.ವೆಂಕಟೇಶಮೂರ್ತಿ. (ನವೆಂಬರ್ 2009). ಕನ್ನಡ ಕೀರ್ತನಾಕಾರರು. ಸಪ್ನ ಬುಕ್ ಹೌಸ್ (ಪ್ರೈ.ಲಿ.), ಗಾಂಧಿನಗರ, ಬೆಂಗಳೂರು.
- ಕಾವ್ಯ ಪ್ರೇಮಿ. ಶಿಶುನಾಳ ಅನುಭಾವ ಗೀತಮಂಜರಿ. ಪುಸ್ತಕಾಲಯ. ಧಾರವಾಡ.
- ಕರ್ನಾಟಕ ಕಬೀರ ಷರೀಫ ಸಾಹೇಬರ ಚರಿತ್ರೆ ಹಾಗು ತತ್ವ ಪದಗಳು. ಪಿ.ಸಿ. ಸಭಾದಿಮಠ ಬುಕ್ ಡಿಪೊ. ಗದಗ.